**<u>ದಿನಾಂಕಃ 22-11-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎಫ್.ಎಂ.ಎಂ. ವಕೀಲರಿಂದಃ</u>**

ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಶಾಲಾ ದಾಖಲೆ ಪ್ರಕಾರ ನನ್ನ ಜನ್ಮ ದಿನಾಂಕವನ್ನು ಹೇಳಲು ಆಗುವುದಿಲ್ಲ. ಈ ಮೊದಲು ನಾನು ಈ ದಾವೆಯಲ್ಲಿ ನಾನು ಮತ್ತು ನನ್ನ ತಂದೆ 5 ನೇ ಪ್ರತಿವಾದಿ ಪಿ.ಸಿ.ದೊಡ್ಡಮನಿ ವಕೀಲರನ್ನು ನೇಮಿಸಿಕೊಂಡಿದ್ದೆವು. ದಾವೆಗೆ ತಕರಾರು ಹಾಕಲು ನಾನು ಮತ್ತು 3 ಮತ್ತು 5 ನೇ ಪ್ರತಿವಾದಿ ಮಾಹಿತಿ ಕೊಟ್ಟಿರುತ್ತೇವೆ. ಶಿವನಗೌಡ 1 ನೇ ಪ್ರತಿವಾದಿ ತೀರಿಕೊಂಡು ಸುಮಾರು 2 ವರ್ಷ ಆಗಿರುತ್ತದೆ. ಅವರು ಈ ದಾವೆಯಲ್ಲಿ ಸಮನ್ಸ ಹೋಗುವ ಮೊದಲು ಮೃತಪಟ್ಟಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 01.04.2021 ರಂದು ಮೃತಪಟ್ಟಿರುತ್ತಾರೆ ಎಂದರೆ ನಿಜ. 20.01.2022 ರಂದು 5 ನೇ ಪ್ರತಿವಾದಿ ಈ ವ್ಯಾಜ್ಯಕ್ಕೆ ತಕರಾರು ಸಲ್ಲಿಸಿರುತ್ತಾರೆ ಎಂದರೆ ನಿಜ. ನಾನು 3 ಮತ್ತು 5 ನೇ ಪ್ರತಿವಾದಿಯರು ತಕರಾರು ಸಲ್ಲಿಸಲು ಮಾಹಿತಿ ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಾಹಿತಿಯನ್ನು ದೊಡ್ಡಮನಿ ವಕೀಲರಿಗೆ ಕೊಟ್ಟಿರುತ್ತೇನೆ. ನಾನು ಈ ದಾವೆಯಲ್ಲಿ ಪ್ರತ್ಯೇಕವಾಗಿ ಪ್ರತಿವಾದಿ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಿ.ಸಿ.ದೊಡ್ಡಮನಿ ವಕೀಲರು ನಮ್ಮ ಗ್ರಾಮದವರು ಎಂದರೆ ನಿಜ. ಮೊದಲಿನಿಂದಲೂ ನಮಗೂ ಅವರಿಗೆ ವಿಶ್ವಾಸ ಇದೆ ಎಂದರೆ ಸರಿಯಲ್ಲ. ಅವರು ನಮ್ಮ ಯಾವುದೇ ಕಾಗದಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಈ ದಾವೆಯಲ್ಲಿ ಸಾಕ್ಷಿ ಹೇಳಿರುವುದಿಲ್ಲ ಎಂದರೆ ನಿಜ, ಮುಂದೆ ಹೇಳುತ್ತಾರೆ.

ಈ ದಾವೆಯಲ್ಲಿ ವಾದಿ ಏನು ಕಾಗದ ಪತ್ರ ಹಾಜರು ಪಡಿಸಿರುತ್ತಾರೆ ಎಂದು ನಾನು ನೋಡಿರುತ್ತೇನೆ. ನಮ್ಮ ಘರಾಣೆದ ಮೂಲ ಪುರುಷ ಹೇಮನಗೌಡ ಇರುತ್ತಾರೆ. ನಾನು ಅವರನ್ನು ನೋಡಿರುವುದಿಲ್ಲ. ನಮ್ಮ ಅಜ್ಜ ಬಸನಗೌಡರನ್ನು ನಾನು ನೋಡಿರುವುದಿಲ್ಲ. ಅವರು ಸತ್ತಾಗ ನಾನು ಇನ್ನು ಜನಿಸಿರಲಿಲ್ಲ. ಮುತ್ತಜ್ಜ

ಹೇಮನಗೌಡ ಯಾವಾಗ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಮುರಡೆವ್ವ 17 ನೇ ತಾರೀಖು 1997 ರಲ್ಲಿ ಮೃತಪಟ್ಟಿರುತ್ತಾರೆ. ಈ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ. ಹೇಮನಗೌಡ ಮತ್ತು ಮರಡೆವ್ವ ದಂಪತಿಗಳಿಗೆ ಬಸನಗೌಡ ಮತ್ತು ಶಿವನಗೌಡ 1 ನೇ ಪ್ರತಿವಾದಿ ಮಕ್ಕಳು ಎಂದರೆ ನಿಜ. 1 ನೇ ಪ್ರತಿವಾದಿಯ ಹೆಂಡತಿ ಗೌರವ್ವ ಎಂದರೆ ನಿಜ. ಗೌರವ್ವ ತೀರಿಕೊಂಡು ಸುಮಾರು 5-6 ವರ್ಷ ಆಯಿತು. ಅವರು ತೀರಿಕೊಂಡು 20 ವರ್ಷಕ್ಕಿಂತ ಹೆಚ್ಚಾಗಿದೆ ಎಂದರೆ ಸರಿಯಲ್ಲ. ಈ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ. ಶಿವನಗೌಡ ಮತ್ತು ಗೌರವ್ವನ ಮಕ್ಕಳು ವಾದಿ ಚನ್ನಬಸವ್ವ ಎಂದರೆ ನಿಜ. ನನ್ನ ಅಜ್ಜಿಯ ಹೆಸರು ಬಸಮ್ಮ ಎಂದರೆ ನಿಜ. ಅವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಬಸವಗೌಡ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಹೇಮನಗೌಡ ಮೃತಪಟ್ಟಾಗ ಶಿವನಗೌಡ 3 ತಿಂಗಳುನವನು ಇದ್ದ ಎಂದರೆ ಸರಿಯಲ್ಲ. ಹೇಮನಗೌಡ ತೀರಿಕೊಂಡ ನಂತರ ಹುಟ್ಟಿರುತ್ತಾರೆ. ಹೇಮನಗೌಡ ತೀರಿಕೊಂಡಾಗ ಶಿವನಗೌಡ ಅಲ್ಪವಯಿ ಇದ್ದ ಎಂದರೆ ಸರಿಯಲ್ಲ. ಬಸನಗೌಡ ಮತ್ತು ಬಸಮ್ಮ ದಂಪತಿಗೆ 2 ರಿಂದ 4 ನೇ ಪ್ರತಿವಾದಿ ಮಕ್ಕಳು ಎಂದರೆ ನಿಜ. ಇವರೆಲ್ಲ ಅವಿಭಕ್ತ ಘರಾಣೆದ ಸದಸ್ಯರು ಎಂದರೆ ಸರಿಯಲ್ಲ. ಇವರು ಅವಿಭಕ್ತ ಘರಾಣೆದ ಸದಸ್ಯರಲ್ಲ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ. ನಂದಿಹಳ್ಳಿ ಗ್ರಾಮದ ಡ-90 ನಿಪಿ-20 ನ್ನು ನೋಡಿರುತ್ತೇನೆ. ಅದನ್ನು ಸರ್ಕಾರದವರು ದನ-ಕರುಗಳಿಗೆ ನೀರು ಕುಡಿಯಲು ವಶಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಡ ಹಿರೇನಂದಿಹಳ್ಳಿ ಗ್ರಾಮದ 6 ಆಸ್ತಿಗಳು ಮೂಲ ಪುರುಷ ಹೇಮನಗೌಡ ತೀರಿಕೊಂಡ ನಂತರ ಅವರ ವಾರಸುನಾತೆ ನನ್ನ ಅಜ್ಜ ಬಸನಗೌಡ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ಬಸನಗೌಡ ಹೆಸರಿಗೆ ಖಾತೆ ಆಗಿ ಡ ಮಂಜೂರಾಗಿದೆ ಎಂದರೆ ನಿಜ. ನನ್ನ ಅಜ್ಜ ಬಸನಗೌಡ ಏಕಘರಾಣೆದ ನಾತೆ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಫಾರಂ-7 ರ ಮಂಜೂರಾತಿ ನಕಲಿನಲ್ಲಿ ನನ್ನ ಅಜ್ಜ ಬಸನಗೌಡರ ಸಹಿ ಎಂದು

ಒಪ್ಪಿಕೊಂಡು ನಂತರ ಅಲ್ಲ ಎಂದು ಹೇಳುತ್ತಾರೆ. ಬಸನಗೌಡ ನಾವು ಆಸ್ತಿಗಳಿಗೆ ಬಾಡಿಗೆದಾರರು ಎಂದು ಹೇಳಿ ಅವುಗಳನ್ನು ಮಂಜೂರು ಮಾಡಲು ಅರ್ಜಿಯನ್ನು ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರವನ್ನು ಓದಿ ಸಹಿ ಮಾಡಿರುತ್ತೇನೆ ನನ್ನ ಅಜ್ಜ ಬಸನಗೌಡ ಭೂ ನ್ಯಾಯ ಮಂಡಳಿಗೆ ಆಸ್ತಿ ಮಂಜೂರು ಮಾಡಲು ಎಂದೂ ಅರ್ಜಿ ಕೊಟ್ಟಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ 15 ನೇ ಪ್ಯಾರಾದಲ್ಲಿ ಬಸನಗೌಡರವರು ಅರ್ಜಿ ಸಲ್ಲಿಸಿರುವುದು ಎಂದು ಬರೆದಿರುವುದು ನಿಜ ಇರುತ್ತದೆ. ಅದರಲ್ಲಿ ನಮ್ಮ ತಂದೆಯವರ ಕಾಲದಿಂದಲೂ ಆಸ್ತಿಯನ್ನು ಸಾಗುವಳಿ ಮಾಡಿಕೊಂಡು ಬಂದಿರುತ್ತೇವೆ ಎಂದು ಬರೆದಿರುವುದು ಸುಳ್ಳು ಇರುತ್ತದೆ. ತಮ್ಮನ ಕುಟುಂಬ 3 ಜನ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ನನ್ನ ಅಜ್ಜ ಫಾರಂ-7 ಸಲ್ಲಿಸಿದ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ಫಾರಂ-7 ನ್ನು ಕೊಟ್ಟವರು ನನ್ನ ಅಜ್ಜ ಶಿವನಗೌಡ ಇರುತ್ತಾರೆ. ಸರ್ವೆ ನಂ. 10/3 ಆಸ್ತಿಯ ಬಗ್ಗೆ ಮಾತ್ರ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಾರಂ-7 ರಲ್ಲಿ ನನ್ನ ಅಜ್ಜ ರಿ.ಸ.ನಂ. 1/4, 36, 40/1, 44/3, 48/2, 26/1 ಮತ್ತು 10/1 ನಮ್ಮ ಮಾಲೀಕತ್ವದಲ್ಲಿ ಇರುವ ಆಸ್ತಿಗಳು ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಒಟ್ಟು 7 ಜಮೀನಿನ ಆಸ್ತಿಗಳಿಗೆ ರೈತನಾತೆ ಸಾಗುವಳಿ ಮಾಡಿಕೊಂಡು ಬಂದಿರುತ್ತೇವೆ ಎಂದು ನನ್ನ ಅಜ್ಜ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ನನ್ನ ಅಜ್ಜ ಸದರಿ ಪ್ರಕರಣದಲ್ಲಿ ರಿ.ಸ.ನಂ. 14/1 ಆಸ್ತಿ ಬಿಟ್ಟು ಉಳಿದ ಜಮೀನಿಗೆ ರೈತನಾತೆ ಸಾಗುವಳಿ ಮಾಡುತ್ತಿದ್ದೇವೆ ಎಂದು ಹೇಳಿಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಂತರ ತಹಶೀಲ್ದಾರ ಬ್ಯಾಡಗಿರವರಿಗೆ ಕಂತು ತುಂಬಲು ನನ್ನ ಅಜ್ಜ ಅರ್ಜಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ಸರ್ವೆ ನಂ. 10 ನ್ನು ಕ್ರಯದ ಕರಾರು ಮಾಡಿಕೊಂಡಿದ್ದೆವೆ ಅದನ್ನು ನಾವು ಅರ್ಜಿಯಲ್ಲಿ ಬಿಡುತ್ತೇವೆ ಎಂದು ಹೇಳಿಕೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಂತರ ಸರ್ವೆ ನಂ. 10 ರಲ್ಲಿ ನನ್ನ ಅಜ್ಜ ಬಸನಗೌಡ 03 ಎಕರೆ 37 ಗುಂಟೆ ಮತ್ತು ಶಿವನಗೌಡ 03 ಎಕರೆ 37 ಗುಂಟೆ ಜಮೀನನ್ನು ಉಜ್ಜಪ್ಪ ಶಿವಪ್ಪ ಬಾವಿಕಟ್ಟೆಯಿಂದ

ಖರೀದಿ ಮಾಡಿರುತ್ತೇವೆ ಎಂದರೆ ನಿಜ. ಈ ಎರಡೂ ಜಮೀನುಗಳು ಇಬ್ಬರಿಗೂ ಒಂದೇ ದಿವಸ ಖರೀದಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ವಾದಿ ಕೆಲವು ಆಸ್ತಿಯನ್ನು ಸೇರಿಸಿರುವುದಿಲ್ಲ ಎಂದು ಹೇಳಿರುವುದು ಮತ್ತು ಅವುಗಳ ಸರ್ವೆ ನಂ. ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ 2 ಆಸ್ತಿಗಳು ಸೇರಿಸಿರುವುದಿಲ್ಲ ಎಂದು ಬರೆದಿರುತ್ತೇನೆ. ಸರ್ವೆ ನಂ. 26/1 ರನ್ನು ದಾವಾ ಬಿ ಅನುಸೂಚಿತ ಆಸ್ತಿ ಇದೆ ಎಂದರೆ ಸರಿಯಲ್ಲ. ಚಿಕ್ಕನಂದಿಹಳ್ಳಿ ಮತ್ತು ಹಿರೇನಂದಿಹಳ್ಳಿ ವ್ಯಾಪ್ತಿಯೊಳಗೆ ಅಂಗರಗಟ್ಟೆಯಲ್ಲಿ ಕೆರೆ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕೆರೆ ಆಗಿ 50 ವರ್ಷ ಆಗಿದೆ ಎಂದರೆ ನಿಜ. ಕೆರೆ ನಿರ್ಮಾಣ ಮಾಡಲು ಚಿಕ್ಕನಂದಿಹಳ್ಳಿ ಗ್ರಾಮಕ್ಕೆ ಹೆಚ್ಚು ಹೋಗಿರುತ್ತಾರೆ ಎಂದರೆ ನಿಜ. ಹಿರೇನಂದಿಹಳ್ಳಿ ಗ್ರಾಮದಲ್ಲಿ ಸ್ವಲ್ಪ ಹೋಗಿವೆ ಎಂದರೆ ನಿಜ. ಸರ್ವೆ ನಂ. 36 ರಲ್ಲಿ ಕೆರೆ ನಿರ್ಮಾಣ ಮಾಡಲು ಭೂಮಿಯನ್ನು ಸ್ವಾಧೀನ ಮಾಡಿಕೊಂಡಿರುತ್ತಾರೆ ಎಂದರೆ ನಿಜ. ಈಗ ಸಣ್ಣ ನೀರಾವರಿ ಇಲಾಖೆಯ ಅಭಿಯಂತಕರು ಜಮೀನಿಗೆ ಮಾಲೀಕರು ಆಗಿರುತ್ತಾರೆ ಎಂದರೆ ನಿಜ. ಸರ್ವೆ ನಂ. 26/1 ರ ಜಮೀನು ಎಷ್ಟು ಇದೆ ಎಂದು ಹೇಳಲಾಗುವುದಿಲ್ಲ. ಅದರಲ್ಲಿ 01 ಎಕರೆ 13 ಗುಂಟೆ ಜಮೀನನ್ನು ಕೆರೆಗೆ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ನಿಜ. ಉಳಿದ 18 ಗುಂಟೆಯನ್ನು ಈ ದಾವೆಯಲ್ಲಿ ಸೇರಿಸಿರುತ್ತಾರೆ ಎಂದರೆ ನಿಜ. ಪ್ರಕರಣವನ್ನು ಮುಂದೂಡಲು ಸುಳ್ಳು ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ.

ವಾದಿಯರು ಶಾಸಕರ ಸಹಾಯ ಇರುತ್ತದೆ. ವಾದಿ ಓದು ಬರಹ ಬಾರದ ವ್ಯಕ್ತಿ ಇರುತ್ತಾರೆ ಎಂದರೆ ಸರಿಯಲ್ಲ. ಅವರು ಯಾವ ರಾಜಕೀಯ ವ್ಯಕ್ತಿಯ ಸಹಾಯ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಶಿವನಗೌಡ ಆಸ್ತಿಗೆ ಸಂಪೂರ್ಣ ಮಾಲೀಕಳು ಎಂದರೆ ಸರಿಯಲ್ಲ. ವಾದಿಯ ಹಿಸ್ಸೆಯ ಆಸ್ತಿಯನು ಎತ್ತಿಹಾಕಬೇಕೆಂದು ಸುಳ್ಳು ಅರ್ಜಿ ಸಲ್ಲಿಸಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹೀರೆನಂದಿಹಳ್ಳಿಯ ಪಾಟಿಲಿಕಿಯನ್ನು ಶಿವನಗೌಡ 1 ನೇ ಪ್ರತಿವಾದಿ ಮಾಡುತ್ತಿದ್ದರು. ಆತನ ಜನ್ಮ ದಿನಾಂಕ ನೆನಪಿರುವುದಿಲ್ಲ. ಅವರ ಪಾಟಿಲಿಕಿ ಕೆಲಸ

ರದ್ದಾಗಿತ್ತು ಎಂದರೆ ಅವರು ಮೃತಪಟ್ಟ ನಂತರ ರದ್ದಾಯಿತು ಎಂದು ಹೇಳುತ್ತಾರೆ. ರಿ.ಸ.ನಂ. 1/4, 36, 40/1, 44/3, 48/2 ಇವು ಪಾಟಿಲಿಕಿ ಜಮೀನುಗಳು ಎಂದರೆ ಸರಿಯಲ್ಲ. ಇವುಗಳನ್ನು ಮುತ್ತಜ್ಜ ಹೇಮನಗೌಡ ಮೊದಲು ಸಾಗುವಳಿ ಮಾಡಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಅವರು ಮೃತಪಟ್ಟ ನಂತರ ಅವರು ಹಿರಿಯ ಮಗ ಪಾಟಿಲಿಕಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಬಸನಗೌಡ ಮೃತಪಟ್ಟ ನಂತರ ಶಿವನಗೌಡ ಪಾಟಿಲಿಕಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪಾಟಿಲಿಕಿ ರದ್ದಾಗಿದ್ದರಿಂದ ಸರ್ಕಾರದವರು ಆಸ್ತಿಯನ್ನು ಮಂಜೂರು ಮಾಡಿದರು ಎಂದರೆ ಸರಿಯಲ್ಲ. ಡಬ್ಲೂ.ಪಿ.ಎ ಎಸ್ ಆರ್ ನಂ.1,129/73 ರ ಪ್ರಕರಣದಲ್ಲಿ ಆಸ್ತಿ ಮಂಜೂರಾಗಿದೆ ಎಂದರೆ ಸರಿಯಲ್ಲ. ಇವು ಪಾಟಿಲಿಕಿ ಇಂದ ಬಂದಂತಹ ಆಸ್ತಿಗಳು ಫಾರಣೆದ ಆಸ್ತಿಗಳು ಎಂದರೆ ಸರಿಯಲ್ಲ.

**ಮುಂದುವರೆದ_ಪಾಟೀ_ಸವಾಲುಃ**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.